ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

1

ಇಲಾಖೆ / ವಿಷಯ : DEPARTMENT / SUBJECT: ರಾಜ್ಯಪಾಲರು

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 21/4/2021

# ರಾಜ್ಯಪಾಲರಿಂದ ಸಭೆ: ಭಿನ್ನ ಅಭಿಪ್ರಾಯ

ಉವಾ 21/4/21

**ಬೆಂಗಳೂರು:** ರಾಜ್ಯಪಾಲರು ಮಂಗಳವಾರ ಕರೆದಿದ್ದ ಸರ್ವಪಕ್ಷ ನಾಯಕರ ಸಭೆ ಕುರಿತು ರಾಜಕೀಯ ವಲಯದಲ್ಲಿ ಸಾಕಷ್ಟು ಪರ-ವಿರೋಧ ಕೇಳಿ ಬಂದಿದೆ. ಇದರ ನಡುವೆ ರಾಜ್ಯಪಾಲರ ಈ ಸಭೆಯ ಬಗ್ಗೆ ಕಾನೂನು ತಜ್ಞರು ಸಹ ಭಿನ್ನ ನಿಲುವುಗಳನ್ನು ವ್ಯಕ್ತಪಡಿಸಿದ್ದಾರೆ.

ಅನೇಕ ವಿಚಾರಗಳಲ್ಲಿ ಸಾಂವಿಧಾನಿಕ ಅಧಿಕಾರವನ್ನು ಹೊಂದಿರುವ ರಾಜ್ಯಪಾಲರು, ಯಾವುದಾದರೂ ಒಂದು ವಿಷಯದಲ್ಲಿ ಈ ರೀತಿ ಮಾಡುವಂತೆ ಸರ್ಕಾರಕ್ಕೆ ಸಲಹೆ ನೀಡಬಹುದು. ಅದರಂತೆ ಸರ್ವಪಕ್ಷ ಸಭೆ ನಡೆಸಿದ್ದರಲ್ಲಿ ತಪ್ಪೇನಿಲ್ಲ ಎಂದು ಕೆಲವು ಕಾನೂನು ತಜ್ಞರು ಹೇಳಿದರೆ, ಅಂತಹ ಅಧಿಕಾರ ರಾಜ್ಯಪಾಲರಿಗೆ ಇಲ್ಲ, ಸರ್ವಪಕ್ಷ ಸಭೆ ಕರೆಯುವ ಸ್ಥಿತಿಗೆ ರಾಜ್ಯಪಾಲರು ಬಂದಿದ್ದಾರೆ ಎಂದಾದರೆ, ರಾಜ್ಯದಲ್ಲಿ ಆಡಳಿತ ಕುಸಿದಿದೆ ಎಂದರ್ಥ. ಎಂದು ಕೆಲವು ಕಾನೂನು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

**ರಾಜ್ಯಪಾಲರು ಹೇಳಿದರೆ ತಪ್ಪೇನಿಲ್ಲ:** ರಾಜ್ಯಪಾಲರು ಹೇಳಿದ್ದನ್ನೆಲ್ಲಾ ಸರ್ಕಾರ ಮಾಡಬೇಕೆಂದೇನಿಲ್ಲ, ಆದರೆ, ಏನೇನು ಮಾಡಿದ್ದೀರಿ, ಏನು ಮಾಡಬಹುದು ಎಂದು ಇದು ಒಂದು ಚರ್ಚೆ ಅಷ್ಟೇ. ಎಷ್ಟೋ ವಿಷಯಗಳಲ್ಲಿ ಪ್ರತಿಪಕ್ಷದವರು ರಾಜ್ಯಪಾಲರಿಗೆ ದೂರು ಅಥವಾ ಮನವಿ ಕೊಡುತ್ತಾರಲ್ಲ, ಕೆಲವೊಂದು ವಿಷಯಗಳಲ್ಲಿ



ರಾಜ್ಯಪಾಲರು ಸಾಂವಿಧಾನಿಕ ಪಾತ್ರ ಹೊಂದಿರುತ್ತಾರೆ. ಕೆಲ ವಿಷಯಗಳಲ್ಲಿ ರಾಜ್ಯಪಾಲರು ಸ್ವತಂತ್ರವಾಗಿ ತೀರ್ಮಾನ ತೆಗೆದುಕೊಳ್ಳಬಹುದು. ಕಾನೂನು ಸುವ್ಯವಸ್ಥೆ ಬಗ್ಗೆ ಕೇಂದ್ರ ಸರ್ಕಾರಕ್ಕೆ ವರದಿ ರವಾನಿಸುವ ಅಧಿಕಾರ ರಾಜ್ಯಪಾಲರು ಹೊಂದಿದ್ದಾರೆ. ರಾಜ್ಯಪಾಲರು ಸರ್ಕಾರದ ವಿರುದ್ಧ ಹೋಗುವ ಹಾಗಿಲ್ಲ, ಆದರೆ, ಇಂತಹ ವಿಷಯವನ್ನು ತ್ವರಿತಗೊಳಿಸಿ, ಈ ರೀತಿ ಮಾಡಿ ಎಂದು ರಾಜ್ಯಪಾಲರು ಹೇಳಬಹುದು ಎಂದು ಮಾಜಿ ಅಡ್ವೋಕೇಟ್ ಜನರಲ್ ಅಶೋಕ್ ಹಾರನಹಳ್ಳಿ ಹೇಳುತ್ತಾರೆ.

**ಸಭೆ ಕರೆದಿರುವುದು ಸರಿಯಲ್ಲ:** ರಾಜ್ಯಪಾಲರು ಈ ಸ್ಥಿತಿ ತಲುಪಿರಬೇಕಾದರೆ ರಾಜ್ಯ ಸರ್ಕಾರ ನಿಷ್ಕ್ರಿಯವಾಗಿದೆ. ಸಂವಿಧಾನದ ವಿಧಿ-ವಿಧಾನದಂತೆ ಆಡಳಿತ ನಡೆಸಲು ಆಡಳಿತ ಪಕ್ಷಕ್ಕೆ ಸಾಧ್ಯವಾಗುತ್ತಿಲ್ಲ, ಆದ್ದರಿಂದ ರಾಷ್ಟ್ರಪತಿ ಆಳ್ವಿಕೆ ಹೇರಿ ಎಂದು ರಾಜ್ಯಪಾಲರು ಶಿಫಾರಸು ಮಾಡುವುದು ಲೇಸು. ರಾಜ್ಯಪಾಲರು ನೇರವಾಗಿ ಮುಖ್ಯ



ಮಂತ್ರಿಯವರ ವಿಚಾರಗಳನ್ನು ಕೈಗೆತ್ತಿಕೊಳ್ಳುವಂತಿಲ್ಲ, ಮುಖ್ಯಮಂತ್ರಿ ಮತ್ತು ಕೌನ್ಸಿಲ್ ಆಫ್ ಮಿನಿಸ್ಟರ್ ರಾಜ್ಯಪಾಲರಿಗೆ ಸಲಹೆ ನೀಡಬೇಕು. ಆದರೆ, ರಾಜ್ಯಪಾಲರೇ ಇಲ್ಲಿ ಮುಖ್ಯಮಂತ್ರಿಯವರಿಗೆ ಹೀಗೆ ಮಾಡಿ ಎಂದು ಸಲಹೆ ನೀಡುತ್ತಿದ್ದಾರೆ. ಇದು ಸಂಪೂರ್ಣ ತಪ್ಪು. ಇಂತಹ ಬೆಳವಣಿಗೆ ರಾಜ್ಯದ ಇತಿಹಾಸದಲ್ಲಿ ಎಂದೂ ನಡೆದಿಲ್ಲ, ಕೌನ್ಸಿಲ್ ಆಫ್ ಮಿನಿಸ್ಟರ್ ಸಲಹೆಯಂತೆ ರಾಜ್ಯಪಾಲರು ನಡೆದುಕೊಳ್ಳಬೇಕೇ ಹೊರತು. ಪ್ರತಿಪಕ್ಷ ನಾಯಕರ ಸಲಹೆಯಂತೆ ಅಲ್ಲ, ಮುಖ್ಯಮಂತ್ರಿಗಳಿಂದ ವರದಿ ತರಿಸಿಕೊಳ್ಳಬಹುದು. ಆದರೆ, ಈ ರೀತಿ ಮಾಡಿ ಎಂದು ಮುಖ್ಯಮಂತ್ರಿಯವರಿಗೆ ರಾಜ್ಯಪಾಲರು ಹೇಳುವಂತಿಲ್ಲ ಎಂದು ಮಾಜಿ ಅಡ್ವೋಕೇಟ್ ಜನರಲ್ ರವಿವರ್ಮ ಕುಮಾರ್ ಅಭಿಪ್ರಾಯಪಟ್ಟಿದ್ದಾರೆ.